

ಚಿತ್ರ: ಗಿರೀಶ ಆದನ್ನವರ

ಹೋಗಲೂ ಅನುಮತಿ ಪಡೆಯಬೇಕು. ಹುಡುಗರೊಂದಿಗೆ ಗಂಡಸರೊಂದಿಗೆ ಚೆಲ್ಲುಚೆಲ್ಲಾಗಿ ವರ್ತಿಸುವುದು ಅಕ್ಷಮ್ಯ ಅಪರಾಧವೇ ಸರಿ. ಇನ್ನು ಮುಟ್ಟಿಸಿಕೊಂಡು ಬಿಟ್ಟರೆ ಮುಗೀತು. ಒಮ್ಮೆಲೇ ವಿಪರೀತ ತಾಕಲಾಟಕ್ಕೆ ಸಿಕ್ಕು ನಜ್ಜುಗುಜ್ಜಾದಂತಾ ಸ್ಥಿತಿ. ಈ ಎಲ್ಲಾ ಪೆಟ್ಟುಗಳಿಂದಾಗಿಯೇ ಮಾನಸಿಕವಾಗಿ ದೈಹಿಕ ವಯಸ್ಸಿಗಿಂತಲೂ ಹುಡುಗಿಯರು ಹೆಚ್ಚಾಗಿ ಬೆಳೆದುಬಿಡುತ್ತಾರೇನೋ.

ಅವತ್ತೊಂದು ದಿನ ನನ್ನ ವಿದ್ಯಾರ್ಥಿನಿಯ ತಾಯಿ ಶಾಲೆಗೆ ಓಡಿಬಂದಿದ್ದಳು. “ಮೇಡಂ, ನಮ್ ಹುಡ್ಗಿ ಶಾಲೆಗ್ ಹೋಗ್ತೀನಿ, ಇಲ್ಲ ಅಂದ್ರೆ ನಮ್ ಮಿಸ್ಸು ಗೈರುಹಾಜರಿ ಹಾಕ್ತಾರೆ. ಅಂತ ಹಟ ಹಿಡ್ದು ಕುಂತವ್ಳೆ. ಆದ್ರೆ ನಮ್ ಮನೆಗಳಲ್ಲಿ ಐದು ದಿನ ಎಲ್ಲು ಹೊರಗೆ ಕಳ್ಸಲ್ಲ. ಐದ್ನೆ ದಿನ ಗುಡುಸ್ಲು ಹಾಕಿ ಆರ್ತಿ ಮಾಡಿದ ಮೇಲೇನೇ ಹೊರಗೆ ಕಳ್ಸೋದು. ದಯವಿಟ್ಟು ಅವಳಿಗೆ ಹಾಜರಿ ಕೊಡ್ತೀವಿ ಅಂತ ಹೇಳಿ...” ಎಂದು ಗೋಗರೆಯುತ್ತಾ ನಿಂತಿದ್ದಳು. ರಮ್ಯಾ ಜಾಣೆ. ಆದರೆ ಮನೆಯ ಸಂಪ್ರದಾಯವನ್ನು ವಿರೋಧಿಸಲು ನಾವ್ಯಾರು. ಸರಿ ಎಂದು ಹೇಳಿ ಸಮಾಧಾನಿಸಿ ಕಳಿಸಿದೆವು. ಐದು ದಿನ ಅವಳು ಕಾಣೆಯಾದಳು. ಆರನೆ ದಿನ ಶಾಲೆಗೆ ಬಂದಳು. ಅಂದೇಕೋ ವಿಶೇಷವಾಗಿ ಕಾಣಿಸಿದಳು. ಅವಳ ಎರಡು ಕುರಿಪಟ್ಟೆ ಕಿವಿಗಳಂಥ ಮಡಚು ಜಡೆಗಳ ಬದಲಾಗಿ